ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

**ಉಪಸ್ಥಿತರು: ಶ್ರೀ ರಿತ್ವಿಕ್ ಪಾಂಡೆ, ಭಾ.ಆ.ಸೇ.**
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ),ಬೆಂಗಳೂರು

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಕನ್ನಡ ಕಾಗುಣಿತ ಚಾರ್ಟ್, ಕನ್ನಡ ಒತ್ತಕ್ಷರ ಚಾರ್ಟ್, ಇತರೆ ಭಾಷೆಯ ಇಂತಹ ಚಾರ್ಟ್‌ಗಳ ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಶ್ರೀ ಸಾಯಿ ಪಬ್ಲಿಕೇಷನ್ಸ್, ಮೈಸೂರು ಇವರ ದಿನಾಂಕ: 08.07.2015ರ ಅರ್ಜಿ.

****

ಅರ್ಜಿದಾರರಾದ ಶ್ರೀ ಬೋರೇಗೌಡ, ವ್ಯವಸ್ಥಾಪಕ ಪಾಲುದಾರರು, ಶ್ರೀ ಸಾಯಿ ಪಬ್ಲಿಕೇಷನ್ಸ್, ಮೊದಲನೇ ಮುಖ್ಯ ರಸ್ತೆ, ನಾಗೇಂದ್ರ ಬ್ಲಾಕ್, ಹನುಮಂತನಗರ, ಬೆಂಗಳೂರು / ನಂ.42, 9ನೇ ಮುಖ್ಯ ರಸ್ತೆ, ವಿನಾಯಕ ನಗರ, ಮೈಸೂರು–12 ಇವರು ಮೇಲ್ಕಂಡ ಅರ್ಜಿಯಲ್ಲಿ ಕನ್ನಡ ಕಾಗುಣಿತ ಚಾರ್ಟ್, ಕನ್ನಡ ಒತ್ತಕ್ಷರ ಚಾರ್ಟ್, ಕನ್ನಡ ವ್ಯಾಕರಣ ಹಿಂದಿ, ಇಂಗ್ಲೀಷ್, ಉರ್ದು ಮತ್ತು ಸಂಸ್ಕೃತ ಭಾಷೆಯಲ್ಲಿ ಇಂತಹ ಚಾರ್ಟ್‌ಗಳ ಮೇಲೆ ಅನ್ವಯವಾಗುವ ತೆರಿಗೆ ದರದ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಈ ಚಾರ್ಟ್‌ಗಳ ಮಾದರಿಯನ್ನು ಲಗತ್ತಿಸಿರುತ್ತಾರೆ.

2) 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು(ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದಡಿಯಲ್ಲಿ ಸಂದಾಯ ಮಾಡತಕ್ಕ ತೆರಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿರುತ್ತಾರೆ. ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3) ಈ ಹಿನ್ನಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆ: ಸಿಎಲ್ಆರ್/ಸಿಆರ್.58/2015-16 ದಿನಾಂಕ 30.07.2015**

'ಕನ್ನಡ ಕಾಗುಣಿತ', 'ಕನ್ನಡ ಒತ್ತಕ್ಷರ', 'ಕನ್ನಡ ವ್ಯಾಕರಣ', ಹಿಂದಿ, ಇಂಗ್ಲೀಷ್, ಉರ್ದು ಮತ್ತು ಸಂಸ್ಕೃತ ಭಾಷೆಯಲ್ಲಿ ಇಂತಹ ಚಾರ್ಟ್‌ಗಳು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯ ಮೊದಲನೇ ಅನುಸೂಚಿಯ ಕ್ರಮ ಸಂಖ್ಯೆ 11ಕ್ಕೆ ಒಳಪಡುವುದರಿಂದ ಇವುಗಳ ಮೇಲೆ ಮೌಲ್ಯವರ್ಧಿತ ತೆರಿಗೆ ವಿನಾಯಿತಿ ಇರುವುದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(ರಿತ್ವಿಕ್ ಪಾಂಡೆ)
ವಾಣಿಜ್ಯ ತೆರಿಗೆ ಆಯುಕ್ತರು
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು